


ಆ್ಯಕ್ರೋಬ್ಯಾಟಿಸಂ ಅನ್ನು ನಾನು ಕ್ರಿಕೆಟ್ ಕಣದಲ್ಲಿ ಕಂಡೇ ಇರಲಿಲ್ಲ' ಎಂಬ ಅವರ ವಿಶ್ಲೇಷಣೆ, 'ಓ... ನೋ ನೋ ನೋ' ಎಂದು ಕೆವಿನ್ ಪೀಟರ್ಸನ್ ತೆಗೆದ ಉದ್ಗಾರ, ಫೀಲ್ಡಿಂಗ್ ಕೋಚ್ ಜಾಂಟಿ ರೋಡ್ಸ್, 'ಇಂತಹ ಫೀಲ್ಡಿಂಗ್ ಇಡೀ ತಂಡದ ಆತ್ಮಸ್ಥೈರ್ಯವನ್ನು ಇನ್ನಷ್ಟು ಸುಧಾರಿಸುತ್ತದೆ' ಎಂದು ಟ್ವೀಟ್ ಮೂಲಕ ಹೊಗಳಿದ್ದು, 'ಸೂಪರ್‌ಮನ್ ನಿಕೊಲಸ್ ಪೂರನ್' ಎಂದು ಅಭಿಮಾನಿಯೊಬ್ಬ ಶ್ಲಾಘಿಸಿದ್ದು... ಪೂರನ್ ಆಟದ ಇನ್ನೊಂದು ಮುಖಕ್ಕೆ ಹಿಡಿದ ಕನ್ನಡಿ. ಕ್ರಿಸ್ ಗೇಲ್‌ಗಿಂತ ಹದಿನಾರು ವರ್ಷ ಚಿಕ್ಕಪ್ರಾಯದ, ನೋಡಲು ದೈತ್ಯ ಎನ್ನುವಂತೇನೂ ಇಲ್ಲದ ಪೂರನ್ ಕೈ ಹಾಗೂ ಕಣ್ಣುಗಳ ನಡುವಿನ ಹೊಂದಾಣಿಕೆ ಚಿತ್ತಾಕರ್ಷಕ. ಅದೇ ಕಾರಣಕ್ಕೆ ಅವರು ಸ್ವಲ್ಪ ಸರಿಯಾದ ಜಾಗಕ್ಕೆ ಬೌಲರ್ ಚೆಂಡನ್ನು ಹಾಕದೇ ಇದ್ದರೂ ಚೆಂಡನ್ನು ಸಿಕ್ಸರ್‌ಗೆ ಸಲೀಸಾಗಿ ಎತ್ತುವುದು.

ಪೂರನ್ ವೃತ್ತಿ ಬದುಕಿನ ಗಟ್ಟಿತನವನ್ನು ಅಂಕಿಅಂಶಗಳು ಹೇಳಲಾರವು. ಯಾಕೆಂದರೆ, ಅವರು ಇದುವರೆಗೆ ಆಡಿರುವ ಅಂತರರಾಷ್ಟ್ರೀಯ ಏಕದಿನ ಪಂದ್ಯಗಳು 25 ಮಾತ್ರ. 49.05ರ ಸರಾಸರಿಯಲ್ಲಿ 932 ರನ್‌ಗಳನ್ನು ಸೇರಿಸಿದ್ದಾರೆ. ಸ್ಟ್ರೈಕ್ ರೇಟ್ 106.51. ಆದರೆ, ಚುಟುಕು ಕ್ರಿಕೆಟ್‌ನಲ್ಲಿ ಚಿಕ್ಕ ವಯಸ್ಸಿನಲ್ಲೇ ಛಾಪು ಮೂಡಿಸುವಂಥ ಆಟವನ್ನು ಆಡಿದ್ದಾರೆ. 21 ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಅವರ ರನ್ ಗಳಿಕೆಯ ಸರಾಸರಿ 23.53. ಸ್ಟ್ರೈಕ್‌ರೇಟ್ 124.73. ಒಂದು ಇನಿಂಗ್ಸ್‌ನಲ್ಲಿ ಗಳಿಸಿದ ಗರಿಷ್ಠ ಸ್ಕೋರ್ 58 ರನ್ ಅಷ್ಟೆ. ಐಪಿಎಲ್ ಅನ್ನು ಅವರು ಸುಖಿಸುತ್ತಿದ್ದಾರೆ. 33.07ರ ಸರಾಸರಿಯಲ್ಲಿ 463 ರನ್‌ಗಳನ್ನು ಅಕ್ಟೋಬರ್ 21ರ ವರೆಗೆ ಅವರು ಗಳಿಸಿದ್ದಾರೆ. ಸ್ಟ್ರೈಕ್ ರೇಟ್ 172.26 ಎನ್ನುವುದಕ್ಕೆ ಅಡಿಗೆರೆ ಎಳೆಯಬೇಕು.

2018ರ ಕೊನೆಯಲ್ಲಿ ಪೂರನ್ ಚೆನ್ನೈ ಪ್ರೇಕ್ಷಕರ ಮನ ಗೆದ್ದರು. ಭಾರತ ಹಾಗೂ ವಿಂಡೀಸ್ ನಡುವೆ ನಡೆದ ಟ್ವೆಂಟಿ20 ಪಂದ್ಯದಲ್ಲಿ ಅವರು ಕ್ರೀಸ್‌ಗೆ ಕಾಲಿಟ್ಟಾಗ ಪ್ರವಾಸಿ ತಂಡ 12.5 ಓವರ್‌ಗಳಲ್ಲಿ 94 ರನ್ ಗಳಿಸಿ 3 ವಿಕೆಟ್ ಕಳೆದುಕೊಂಡಿತ್ತು. ಭುವನೇಶ್ವರ್ ಕುಮಾರ್ ಸ್ವಿಂಗ್ ಅನುಭವವನ್ನೂ ಲೆಕ್ಕಿಸದೆ ಒಂದರ ಹಿಂದೆ ಒಂದರಂತೆ ಎರಡು ಸಿಕ್ಸರ್‌ಗಳನ್ನು ಹೊಡೆದರು. 12 ಎಸೆತಗಳನ್ನು ಆಡಿ 21 ರನ್ ಗಳಿಸುವಷ್ಟರಲ್ಲಿ ಪೂರನ್‌ಗೆ ಯಜುವೇಂದ್ರ ಚಹಲ್ ಸ್ಪಿನ್ ಸವಾಲು ಎದುರಾಯಿತು. ಚಾಹಲ್ ಮೊದಲ ಎಸೆತವನ್ನು ಸ್ಕ್ವೇರ್ ಲೆಗ್ ಫೀಲ್ಡರ್ ತಲೆಮೇಲೆ ಸಿಕ್ಸರ್‌ಗೆ ಎತ್ತಿದರು. ಕೊನೆಯ 4 ಎಸೆತಗಳಲ್ಲಿ 12 ರನ್ ಹೊಡೆದರಷ್ಟೇ ಅರ್ಧಶತಕದ ಗುರಿ ಮುಟ್ಟಲು ಸಾಧ್ಯ ಎನ್ನುವ ಸ್ಥಿತಿ. ಪೂರನ್ ಅದನ್ನೂ ಸಾಧಿಸಿದರು. 24 ಎಸೆತಗಳಲ್ಲೇ ಅಂತರರಾಷ್ಟ್ರೀಯ ಟಿ20ಯಲ್ಲಿ ಚೊಚ್ಚಲ ಅರ್ಧಶತಕ ದಾಖಲಿಸಿದ್ದು ಸಾಧನೆಯೇ ಸರಿ. ಆ ಪಂದ್ಯವನ್ನು ವಿಂಡೀಸ್ ಸೋತಿತಾದರೂ ಪೂರನ್ ಕ್ರೀಡಾಭಿಮಾನಿಗಳ ಹೃದಯ ಗೆದ್ದಿದ್ದರು.

ಇಪ್ಪತ್ತೈದರ ಹುಡುಗನೊಬ್ಬನ ಬದುಕು ಇಷ್ಟು ಸಿನಿಮೀಯ ಆಗಿರಬಹುದೇ ಎಂದು ಹುಬ್ಬೇರುವಂತೆ ನಿಕೊಲಸ್ ಪೂರನ್ ಇದುವರೆಗೆ ಜೀವಿಸಿದ್ದಾರೆ. ನೋವಿನ, ನಿಷೇಧದ, ವೆಸ್ಟ್‌ಇಂಡೀಸ್ ಕ್ರಿಕೆಟ್ ಮಂಡಳಿಯ ಆರ್ಥಿಕ ಬಿಕ್ಕಟ್ಟಿನ ಕಹಿಗಳನ್ನೆಲ್ಲ ನುಂಗಿ ಅವರು ವಿಷಕಂಠ ಆಗಿದ್ದಾರೋ ಏನೋ? ವಿಂಡೀಸ್ ದೇಶದ ಕ್ರಿಕೆಟ್ ಆರ್ಥಿಕವಾಗಿ ಚೆನ್ನಾಗಿ ಇದ್ದಿದ್ದರೆ ಇಂತಹ ಹುಡುಗರು ಯಾಕೆ ಚುಟುಕು ಕ್ರಿಕೆಟ್‌ನ ಹಂಗಿಗೆ ಬಿದ್ದು ಬೇರೆ ಬೇರೆ ಕಡೆಯೆಲ್ಲ ಆಡಬೇಕಿತ್ತು. ಪೂರನ್ ತರಹದ ಪ್ರತಿಭೆಗಳಿಗೆ ಟೆಸ್ಟ್ ಕ್ರಿಕೆಟ್‌ನ ಸಾಣೆ ಸಿಗಬೇಕಿದೆ. ದಾಳಿಕೋರತನವನ್ನು ಸ್ವಲ್ಪ ಸಂಯಮದಲ್ಲೂ ಅದ್ದಿ ತೆಗೆದರೆ ಹೊಳೆಯುವ ಚಿನ್ನದಂಥ ಕ್ರಿಕೆಟ್ ಪ್ರತಿಭೆ ಜಗತ್ತಿಗೆ ದೊರೆಯುವುದರಲ್ಲಿ ಅನುಮಾನವಿಲ್ಲ.